<u>ದಿನಾಂಕ 11 ನೇ ಜೂನ್2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ</u> ಪ್ರತಿವಾದಿಯ ಪರ ವಕೀಲರಿಂದ ಃ -

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಹಿ ಮಾಡಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿದೆ.

ದಿ. 30.04.1996 ರ ಕ್ರಯ ಪತ್ರದ ಮೂಲ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ಗುರುತಿಸಲು ವಾದಿ ಪರ ವಕೀಲರು ತಕಾರರು ಮಾಡಿರುತ್ತಾರೆ. ವಾದಿಯ ಉಪ ನೋಂದಣಾಧಿಕಾರಿ ಕಚೇರಿಯಿಂದ ಸದರಿ ಕ್ರಯಪತ್ರದ ದೃಡೀಕೃತ ನಕಲು ಪಡೆದಿದ್ದು ಅದರಲ್ಲಿ ಸಹಿಗಳು ಹಾಗೂ ಮೂಲದಾಖಲಾತಿಯಲ್ಲಿ ಪಕ್ಷಗಾರರ ಹಾಗೂ ವಕೀಲರ ಸಹಿಗಳು ಹೊಂದಾಣಿಕೆ ಆಗುತ್ತಿಲ್ಲ ಎಂದು ತಿಳಿಸಿರುತ್ತಾರೆ. ಮೊದಲನೆ ಪುಟದಲ್ಲಿ ಸರ್ವೆ ನಂ 293/3 ಎ ಮುಂಭಾಗ ತಿದ್ದುಪಡಿ ಆಗಿದೆ ಎಂದು ತಿಳಿಸಿರುತ್ತಾರೆ. ಆದರೆ ಸದರಿ ದಾಖಲಾತಿ ಮೂಲ ದಾಖಲಾತಿ ಆಗಿದ್ದು ಹಾಗೂ ನೊಂದಾಯಿತ ದಾಖಲಾತಿ ಆಗಿರುವ ಕಾರಣ ಹಾಗೂ ವಾದಿ ಪರ ವಕೀಲರ ಬಳಿ ಇರುವ ದಾಖಲಾತಿ ದೃಢೀಕೃತ ನಕಲು ಆಗಿರುವ ಕಾರಣ ತಕಾರಾರಿಗೆ ಒಳಪಟ್ಟು ನಿ ಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಡಿ 2 ರಲ್ಲಿ ಎಲ್ಲ ಪುಟಗಳಲ್ಲಿ ಮಾರಾಟಗಾರರ ಸಹಿಗಳನ್ನು ಹಾಗೂ ಕೊನೆಯ ಪುಟ್ಟದಲ್ಲಿ ಮಾರಾಟಗಾರರ, ಖರೀದಿಗಾರರ ಹಾಗೂ ಸಾಕ್ಷಿದಾರರ ಹಾಗೂ ವಕೀಲರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿ ಡಿ 2 ಎ ಎಂದು ಗುರುತಿಸಲಾಯಿತು. ಮಾರಾಟಗಾರರಾದ ಗುಂಡುರಾವ್ ರವರ ಸಹಿಯನ್ನು ನಿ ಡಿ 2 ಬಿ ಎಂದು, ಲಕ್ಷ್ಮೀ ನರಸಿಂಹ ಹೆಚ್ ಜಿ ರವರ ಸಹಿಯನ್ನು ನಿ ಡಿ 2 ಸಿ, ಜಗದೀಶ್‌ರವರ ಸಹಿಯನ್ನು ನಿ ಡಿ 2 ಡಿ ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ ಬಿ. ಎನ್ ಭದ್ರಿ ನಾರಾಯಣರವರ ಹಿಯನ್ನು ನಿ ಡಿ 2 ಇ ಎಂದು, ಮತ್ತೊಬ್ಬ ಸಾಕ್ಷಿದಾರರಾದ ಎಂ. ವಿ ರಾಮಚಂದ್ರರವರ ಸಹಿಯನ್ನು ನಿ ಡಿ 2 ಎಫ್ ಎಂದು, ವಕೀಲರ ಸಹಿಯನ್ನು ನಿ ಡಿ 2 ಜಿ ಎಂದು ಗುರುತಿಸಲಾಯಿತು. ನೊಂದಾಯಿತು ವಿಭಾಗದ ದೃಢೀಕೃತ ನಕಲನ್ನು ನಿ ಡಿ 3 ಎಂದು, ಮೂರು ಕಂದಾಯ ರಶೀದಿಗಳ ದೃಢೀಕೃತ ನಕಲನ್ನು ನಿ ಡಿ 4 ರಿಂದ ನಿ ಡಿ 6 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಲಾಗಿ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.